**ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಜಮಖಂಡಿ**

ಓ.ಎಸ್.ನಂ : **5/2014**

ಪಿ.ಡಬ್ಲೂ: **2**

| | | |
|---|---|---|
| ಸಾಕ್ಷಿದಾರರ ಪೂರ್ಣ ಹೆಸರು | : | ವಿ.ಅರವಿಂದನ್ ವೇದಮನಿ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಸಹಾಯಕ ನಿರ್ದೇಶಕರು, ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು. |
| ವಾಸಸ್ಥಳ | : | ಬೆಂಗಳೂರು |

ಸಾಕ್ಷಿಯ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮೂಲಕ ತೆಗೆದುಕೊಳ್ಳಲಾಯಿತು.

ದಿನಾಂಕಃ-23-02-2022 ರಂದು ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಶ್ರೀ. ಡಿ.ಎಮ್.ಜೆ ವಕೀಲರಿಂದ**

- ನಾನು 17 ವರ್ಷದಿಂದ ವಿಧಿ ವಿಜ್ಞಾನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ. ಜಮಖಂಡಿ ಶಹರ ಠಾಣೆಯ ಕ್ರೈಂ ನಂ.86/2012 ರಲ್ಲಿ ಮೃತ್ಯು ಪತ್ರ ಮತ್ತು ಮಾದರಿ ಸಹಿಗಳು ಹೋಲಿಕೆಗೆಂದು ನನ್ನ ಬಳಿ ಬಂದಾಗ ಆ ಎಲ್ಲಾ ದಾಖಲೆಗಳನ್ನು ವೈಜ್ಞಾನಿಕ ಯಾಂತ್ರೋಪಕರಣಗಳ ಮೂಲಕ ಹೋಲಿಕೆ ಮಾಡಿ ನೋಡಿ ನನ್ನ ಅಭಿಪ್ರಾಯವನ್ನು ಕೊಟ್ಟಿದ್ದೇನೆ. ಸದರಿ ಹೋಲಿಕೆಯನ್ನು ವಿಡಿಯೋ ಸ್ಪೆಕ್ಟರಲ್ ಕಂಪ್ಯಾರಿಸನ್, ಪಿರಿಯೋಸ್ಕೊಪಿಕೋ, ಮೈಕ್ರೊವಾಚರ್ ಮುಂತಾದ ಉಪಕರಣಳಿಂದ ವೈಜ್ಞಾನಿಕವಾಗಿ ಪರೀಕ್ಷೆ ಮಾಡಿ ನನ್ನ ಅಭಿಪ್ರಾಯ ಕೊಟ್ಟಿದ್ದೇನೆ. ನನಗೆ ಬಂದಂತಹ ಮೃತ್ಯು ಪತ್ರ ಮೂಲ ಪ್ರತಿ ಇರುತ್ತದೆ.. ಸಾಕ್ಷಿ ಈಗ ನಿಡಿ-1 ನ್ನು ನೋಡಿ ಅದು ನನ್ನ ಅಭಿಪ್ರಾಯಕ್ಕೆ ಬಂದ ದಾಖಲೆ ಇದ್ದು ಸಾಕ್ಷಿ ಕಚೇರಿ ಮೊಹರು ಮತ್ತು ಕ್ಯೂ-1 ಅಂತಾ ನೋಡಿ ಗುರುತಿಸುತ್ತಾರೆ. ನಿಡಿ-2 ನ್ನು ಸಾಕ್ಷಿ ಈಗ ನೋಡಿ ಅದರಲ್ಲಿ ವಿವಾದಿತ ಸಹಿ ಕ್ಯೂ-2 ಎಂದು ನೋಡಿ ದಾಖಲೆಯನ್ನು ಗುರುತಿಸುತ್ತಾರೆ.

ಈ ಹಂತದಲ್ಲಿ ಸಾಕ್ಷಿ ಈ ಪ್ರಕರಣದಲ್ಲಿನ ದಾಖಲೆಗಳನ್ನು ಹೋಲಿಕೆ ಮಾಡುವ ಸಂದರ್ಭದಲ್ಲಿ ದಿಃ01.03.2007 ರ ಅಡಮಾನ ಪತ್ರದಲ್ಲಿನ ಸಹಿಗಳೊಂದಿಗ ಮೃತ್ಯುಪತ್ರದಲ್ಲಿನ ಸಹಿಗಳನ್ನು ಹೋಲಿಕೆ ಮಾಡಿದ್ದು ಸಿಸಿ 24/2016 ರಲ್ಲಿ ಸದರಿ ದಾಖಲೆಗಳ ಲಭ್ಯತೆಯನ್ನು

ನೋಡಲಾಗಿ ಇಲ್ಲದೇ ಇರುವ ಕಾರಣದಿಂದ ಅದನ್ನು ಪತ್ತೆ ಹಚ್ಚುವ ಅವಶ್ಯಕತೆ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/- ಸಹಿ/-

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ.